## ವ್ಯವಹಾರ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ಃ ಬೇಲೂರು

ಃಸಿಸಿ ಸಂಖ್ಯೆಃ 397ಃ 2018 ಃ

ಫಿರ್ಯಾದುದಾರರು ಃ ಸರ್ಕಾರದ ಪರವಾಗಿ
ಅಬಕಾರಿ ಪೊಲೀಸ್, ಬೇಲೂರು

ವಿರುದ್ಧ

ಆರೋಪಿಗಳು :

1. ನಂದನ್ ಬಿನ್ ಎನ್.ಆರ್. ಲೋಕೇಶ್,
ಸುಮಾರು 36 ವರ್ಷ ವಯಸ್ಸು,
2. ಸುಶೀಲ ಕೋಂ ಲೋಕೇಶ್,

ಇಬ್ಬರೂ ನಂದಗೋಡನಹಳ್ಳಿ ಗ್ರಾಮ, ಅರೇಹಳ್ಳಿ
ಹೋಬಳಿ, ಬೇಲೂರು ತಾಲ್ಲೂಕು.

- - -

### ಃದೋಷಾರೋಪಣೆಃ

ಶ್ರೀ ನಾಗೇಶ ಸಿ. ಬಿ.ಎ.ಎಲ್ , ಎಲ್ಎಲ್.ಬಿ., ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ಬೇಲೂರು ಆದ ನಾನು ಆರೋಪಿಗಳಾದ ನಿಮ್ಮನ್ನು ಈ ಕೆಳಕಂಡ ದೋಷಾರೋಪಣೆಗೆ ಗುರಿಪಡಿಸುತ್ತಿದ್ದೇನೆಃ-

1) ದಿನಾಂಕಃ 18-11-2017 ರಂದು ಮಃ 3 ಗಂಟೆ ಸಮಯದಲ್ಲಿ ಬೇಲೂರು ತಾಲ್ಲೂಕು, ಅರೇಹಳ್ಳಿ ಹೋಬಳಿ, ನಂದಗೋಡನಹಳ್ಳಿ ಗ್ರಾಮದಲ್ಲಿ ಆರೋಪಿತರಾದ ನೀವುಗಳು, ನಿಮ್ಮ ವಾಸದ ಮನೆಯ ಹಿಂಭಾಗದಲ್ಲಿರುವ ಬಚ್ಚಲು ಮನೆಯಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ತಯಾರಿಸುವ ಸಲುವಾಗಿ 15 ಲೀಟರ್ ಸಾಮರ್ಥ್ಯದ 2 ಪ್ಲಾಸ್ಟಿಕ್ ಕೊಡದಲ್ಲಿ ತಲಾ 15 ಲೀಟರ್‌ನಂತೆ ಒಟ್ಟು 30 ಲೀಟರ್ ಸಾಮರ್ಥ್ಯದ ಬೆಲ್ಲದ ಕೊಳೆಯನ್ನು ಹಾಗೂ 5 ಲೀಟರ್ ಸಾಮರ್ಥ್ಯದ ಪ್ಲಾಸ್ಟಿಕ್ ಕ್ಯಾನ್‌ನಲ್ಲಿ ಸುಮಾರು 5 ಲೀಟರ್‌ಗಳಷ್ಟು ಕಳ್ಳಭಟ್ಟಿ ಸಾರಾಯಿಯನ್ನು ಕಾನೂನು ಬಾಹಿರವಾಗಿ ಯಾವುದೇ ಪರವಾನಗಿ ಇಲ್ಲದೇ, ನಿಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡು, ಕರ್ನಾಟಕ ಅಬ್ಕಾರಿ ಕಾಯ್ದೆ ಕಲಂ. 32(1) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರಿ?

2) ಎರಡನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು, ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ತಯಾರಿಸುವ ಸಲುವಾಗಿ 15 ಲೀಟರ್ ಸಾಮರ್ಥ್ಯದ 2 ಪ್ಲಾಸ್ಟಿಕ್ ಕೊಡದಲ್ಲಿ ತಲಾ 15 ಲೀಟರ್‌ನಂತೆ ಒಟ್ಟು 30 ಲೀಟರ್ ಸಾಮರ್ಥ್ಯದ ಬೆಲ್ಲದ ಕೊಳೆಯನ್ನು ಹಾಗೂ 5 ಲೀಟರ್ ಸಾಮರ್ಥ್ಯದ ಪ್ಲಾಸ್ಟಿಕ್ ಕ್ಯಾನ್‌ನಲ್ಲಿ ಸುಮಾರು 5 ಲೀಟರ್‌ಗಳಷ್ಟು ಕಳ್ಳಭಟ್ಟಿ ಸಾರಾಯಿಯನ್ನು ಅಕ್ರಮವಾಗಿ ಸ್ವಾಧೀನ ಹೊಂದಲು ನಿಮ್ಮ ವಾಸದ ಮನೆಯ ಹಿಂಭಾಗದಲ್ಲಿರುವ ಬಚ್ಚಲು ಮನೆಯನ್ನು ಅನುವು ಮಾಡಿಕೊಂಡಿದ್ದು, ಆದರನ್ವಯ ಕರ್ನಾಟಕ ಅಭ್ಕಾರಿ ಕಾಯ್ದೆ ಕಲಂ. 38(ಎ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರಿ?

3) ಮೂರನೇಯದಾಗಿ, ಮೇಲ್ಕಂಡ ಅದೇ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವು, ನಿಮ್ಮ ವಾಸದ ಮನೆಯ ಹಿಂಭಾಗದಲ್ಲಿರುವ ಬಚ್ಚಲು ಮನೆಯಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ತಯಾರಿಸುವ ಸಲುವಾಗಿ ಮಾನವ ಜೀವಕ್ಕೆ ಹಾನಿಕರವಾದ ಕಲಬೆರಿಕೆ ಪಾನೀಯವಾದ 15 ಲೀಟರ್ ಸಾಮರ್ಥ್ಯದ 2 ಪ್ಲಾಸ್ಟಿಕ್ ಕೊಡದಲ್ಲಿ ತಲಾ 15 ಲೀಟರ್‌ನಂತೆ ಒಟ್ಟು 30 ಲೀಟರ್ ಸಾಮರ್ಥ್ಯದ ಬೆಲ್ಲದ ಕೊಳೆಯನ್ನು ಹಾಗೂ 5 ಲೀಟರ್ ಸಾಮರ್ಥ್ಯದ ಪ್ಲಾಸ್ಟಿಕ್ ಕ್ಯಾನ್‌ನಲ್ಲಿ ಸುಮಾರು 5 ಲೀಟರ್‌ಗಳಷ್ಟು ಕಳ್ಳಭಟ್ಟಿ ಸಾರಾಯಿಯನ್ನು ಅಕ್ರಮವಾಗಿ ಸ್ವಾಧೀನ ಹೊಂದಿದ್ದು, ಕಾರಣ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂಃ 272 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರಿ?

ಮೇಲ್ಕಂಡ ಆರೋಪಿಗೆ ದೋಷಾರೋಪಣೆಯ ಸಾರಾಂಶವನ್ನು ಅವರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ ಎಂದು ಈ ಮೂಲಕ ಧೃಡೀಕರಿಸುತ್ತೇನೆ.

ಸ್ಥಳಃ ಬೇಲೂರು
ದಿನಾಂಕಃ 18-03-2021 ಜೆಎಂಎಫ್‌ಸಿಃಬೇಲೂರು

## ವ್ಯವಹಾರ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ಃ ಬೇಲೂರು

**ಃಸಿಸಿ ಸಂಖ್ಯೆಃ 397ಃ 2018 ಃ**

**ಆರೋಪಿಯ ಹೆಸರು ಃ ನಂದನ್ ಆ-1**
**ತಂದೆಃಗಂಡನ ಹೆಸರು ಃ ಲೊಕೇಶ್**
**ವಯ್ಯಸ್ಸು ಃ 36 ವರ್ಷ**
**ವಾಸ ಸ್ಥಳ ಃ ನಂದಗೋಡನಹಳ್ಳಿ ಗ್ರಾಮ, ಅರೇಹಳ್ಳಿ ಹೋಬಳಿ, ಬೇಲೂರು ತಾಲ್ಲೂಕು**

ಪ್ರಶ್ನೆಃ1 ನಾನು ತಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?
ಉತ್ತರಃ

ಪ್ರಶ್ನೆಃ2 ಸದರೀ ಆರೋಪಣೆಯನ್ನು ಒಪ್ಪಿಕೊಳ್ಳುವೆಯೋ?
ಅಥವಾ ವಿಚಾರಣೆಯಾಗಬೇಕೋ?
ಉತ್ತರಃ

ಮೇಲ್ಕಂಡ ಆರೋಪಿಯ ಪರೀಕ್ಷೆಯನ್ನು ನನ್ನ ಸಮಕ್ಷಮ ಮತ್ತು ವೈಯ್ಯಕ್ತಿಕ ಕೇಳಿಕೆ ಮೇಲೆ ಮಾಡಿಕೊಂಡಿದ್ದು ಮತ್ತು ದಾಖಲಾತಿಯ ಸಂಪೂರ್ಣ ಮತ್ತು ಸತ್ಯವಾದ ಆರೋಪಿಯ ಹೇಳಿಕೆಯನ್ನು ಒಳಗೊಂಡಿರುತ್ತದೆ ಎಂದು ಈ ಮೂಲಕ ಧೃಡೀಕರಿಸುತ್ತೇನೆ.

ಸ್ಥಳಃಬೇಲೂರು
ದಿನಾಂಕಃ 18-03-2021 ಜೆಎಂಎಫ್‌ಸಿಃಬೇಲೂರು

## ವ್ಯವಹಾರ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ಃ ಬೇಲೂರು

**ಃಸಿಸಿ ಸಂಖ್ಯೆಃ 397ಃ 2018 ಃ**

**ಆರೋಪಿಯ ಹೆಸರು ಃ ಸುಶೀಲ ಆ-2**
**ತಂದೆಃಗಂಡನ ಹೆಸರು ಃ ಲೊಕೇಶ್**
**ವಯ್ಯಸ್ಸು ಃ 36 ವರ್ಷ**
**ವಾಸ ಸ್ಥಳ ಃ ನಂದಗೋಡನಹಳ್ಳಿ ಗ್ರಾಮ, ಅರೇಹಳ್ಳಿ ಹೋಬಳಿ, ಬೇಲೂರು ತಾಲ್ಲೂಕು**

ಪ್ರಶ್ನೆಃ1 ನಾನು ತಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?
ಉತ್ತರಃ

ಪ್ರಶ್ನೆಃ2 ಸದರೀ ಆರೋಪಣೆಯನ್ನು ಒಪ್ಪಿಕೊಳ್ಳುವೆಯೋ?
ಅಥವಾ ವಿಚಾರಣೆಯಾಗಬೇಕೋ?
ಉತ್ತರಃ

ಮೇಲ್ಕಂಡ ಆರೋಪಿಯ ಪರೀಕ್ಷೆಯನ್ನು ನನ್ನ ಸಮಕ್ಷಮ ಮತ್ತು ವೈಯ್ಯಕ್ತಿಕ ಕೇಳಿಕೆ ಮೇಲೆ ಮಾಡಿಕೊಂಡಿದ್ದು ಮತ್ತು ದಾಖಲಾತಿಯ ಸಂಪೂರ್ಣ ಮತ್ತು ಸತ್ಯವಾದ ಆರೋಪಿಯ ಹೇಳಿಕೆಯನ್ನು ಒಳಗೊಂಡಿರುತ್ತದೆ ಎಂದು ಈ ಮೂಲಕ ಧೃಡೀಕರಿಸುತ್ತೇನೆ.

ಸ್ಥಳಃಬೇಲೂರು
ದಿನಾಂಕಃ 18-03-2021 ಜೆಎಂಎಫ್‌ಸಿಃಬೇಲೂರು ೀಲೂರು